freedom ಇರಬೇಕು. Let them have full freedom. Let them deal with the miscreants impartially. That is why I am underlining the word "Impartially." Impartial ಆಗಿ ಮಾಡಬೇಕು. Now we will be happy, if the Mysore city comes to normalcy. I am the first man to welcome it. Entire state ನೋಡುತ್ತಿದೆ. ಮೈಸೂರಿನಂತಹ ನಗರದಲ್ಲಿ ಇದು ಆಗಬಾರದು. ಇನ್ನು ಮುಂದೆ ಈ ತರಹದ್ದು ಆಗಬಾರದು ಎಂದು ನಾನು ಮನವಿ ಮಾಡುತ್ತೇನೆ. ಇವತ್ತು ಮಾನ್ಯ ಜನಾರ್ಧನರೆಡ್ಡಿ ಹೇಳಿರುವಂಥದ್ದು ಕೂಡ ಕಡತದಿಂದ ತೆಗೆದು ಹಾಕಬೇಕು. ಅವರು ಅವರ ಸದಸ್ಯರಿಗೆ ಬುದ್ಧಿವಾದ ಹೇಳಬೇಕು. ಈ ತರಹ ಎದ್ದು ಮಾತನಾಡಿ, ಆರೋಪಗಳನ್ನು ಮಾಡಿ ಹೊರಟು ಹೋದರೆ ಆಗುವುದಿಲ್ಲ. The House is supreme. You have got all the right to take any action against any member. ನಿಮಗೆ ಅಗೌರವ ತರತಕ್ಕಂತಹ ಕೆಲಸ ನಾವು ಮಾಡುವುದಕ್ಕೆ ಹೋಗುವುದಿಲ್ಲ. ನಿಮಗೆ ಹಾಗೂ ಈ ಸದನಕ್ಕೆ ಗೌರವ ತರತಕ್ಕಂತಹ ಕೆಲಸವನ್ನು ಮಾಡುತ್ತೇವೆ. ಅವರು ಯಾರೇ ಆಗಲಿ, ಮಂತ್ರಿಗಳಾಗಲಿ, ಸದಸ್ಯರಾಗಲಿ, ಅಗೌರವ ತಂದರೆ, whatever you deem if fit under the provisions of law, you may take any action.

ಅಧ್ಯಕ್ಷರು : ದಯವಿಟ್ಟು ಮಾನ್ಯ ಸದಸ್ಯರುಗಳೆಲ್ಲಾ ತಮ್ಮ ತಮ್ಮ ಸ್ಥಾನಗಳಿಗೆ ಹೋಗಬೇಕು.

(ಧರಣಿ ನಿರತ ಕಾಂಗ್ರೆಸ್ ಲಕ್ಷದ ಶಾಸಕರು ಧರಣಿಯನ್ನು ಮುಕ್ತಾಯಗೊಳಿಸಿ ತಮ್ಮ ಸ್ಥಾನಗಳಿಗೆ ವಾಪಸ್ಸಾದರು)

ಶ್ರೀ ಹೆಚ್. ಡಿ.ರೇವಣ್ಣ : ಮಾನ್ಯ ಸಭಾಧ್ಯಕ್ಷರೇ, ಮೈಸೂರಿನಲ್ಲಿ ಇಂತಃ ಒಂದು ಘಟನೆ ಆಗಬಾರದಿತ್ತು. ಮೈಸೂರು ನಗರದ ಜನತೆಯ ಶಾಂತಿ ಕಾಪಾಡುವುದಕ್ಕೆ ನಾವು ಈ ಸದನದ ಮುಖೇನ ಮನವಿ ಮಾಡಬೇಕೆಂದು ತಮ್ಮನ್ನು ಕೋರುವುದರ ಜೊತೆಗೆ ಯಾವುದೇ ಸಂಘಟನೆಗಳು ಇಂತಹ ಶಾಂತಿಯನ್ನು ಭಂಗ ಮಾಡುವುದಕ್ಕೆ ಅವಕಾಶ ಕೊಡಬಾರದು, ನಿಷ್ಪಕ್ಷಪಾತವಾಗಿ ಇದನ್ನು ಖಂಡಿಬೇಕೆಂದು ನಾನು ತಮ್ಮ ಮುಖೇನ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಮನವಿ ಮಾಡುತ್ತೇನೆ. ಇದು ಯಾವುದೆ ಸಂಘಟನೆ ಇದ್ದರೂ ತನಿಖೆ ಮಾಡಿ ಅದರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಂಡು ಮೈಸೂರು ನಗರದ ಜನತೆಯ ಶಾಂತಿಗೆ ಬಂಗ ತರದ ಹಾಗೆ ಕಾನೂನಿನ ವ್ಯವಸ್ಥೆ ಮಾಡಬೇಕೆಂದು ಸನ್ಮಾನ್ಯ ಮುಖ್ಯ ಮಂತ್ರಿಗಳನ್ನು ತಮ್ಮ ಮುಖೇನ ಮನವಿ ಮಾಡುತ್ತೇನೆ.

ಅಧ್ಯಕ್ಷರು : ಈ ವಿಷಯದ ಬಗ್ಗೆ ಮಾನ್ಯ ಮುಂತ್ರಿಗಳು ಮಾನ್ಯ ವಿರೋಧ ಪಕ್ಷದ ನಾಯಕರುಗಳು ಮತ್ತು ಇನ್ನಿತರ ಗೌರವಾನ್ವಿತ ಸದಸ್ಯರು ತಮ್ಮ ಹಲವಾರು ವಿಚಾರಗಳನ್ನು ಈ ಸದನದ ಗಮನಕ್ಕೆ ತೆಗೆದುಕೊಂಡು ಬಂದಿದ್ದಾರೆ. ಮೈಸೂರಿನಲ್ಲಿ

ನಡೆದಂತಹ ಘಟನಾವಳಿ ಬಹಳ ಸೂಕ್ಷ್ಮವಾದ ವಿಚಾರ. ಅಲ್ಲಿ ಶಾಂತಿಯನ್ನು ಕಾಪಾಡಿಕೊಂಡು ಹೋಗಬೇಕೆನ್ನುವಂತಹ ಕರೆಯನ್ನು ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಕರೆದಿದ್ದಾರೆ. ಮಾನ್ಯ ಸದಸ್ಯರಾದ ಶ್ರೀ ಶಂಕರಲಿಂಗೇಗೌಡರು ಏನು ಕೆಲವೊಂದು ವಿಷಯಗಳನ್ನು ಪ್ರಸ್ತಾಪ ಮಾಡಿದರು, ಆ ವಿಷಯದ ಬಗ್ಗೆಯೂ ಇಲ್ಲಿ ಸಾಕಷ್ಟು ಚರ್ಚೆ ಆಗಿದೆ. ನಾನು ಸಭಾಧ್ಯಕ್ಷನಾಗಿ ಆಗಲೇ ಅವರು ಆ ಹೇಳಿಕೆ ಕೊಟ್ಟಂತಹ ಸಂದರ್ಭದಲ್ಲಿ ಅವರ ಹೇಳಿಕೆಯನ್ನು ಕಡತದಿಂದ ತಗೆದು ಹಾಕಬೇಕೆಂದು ನಾನು ಆಗಲೇ ರೂಲಿಂಗ್ ಕೊಟ್ಟಿದ್ದೇನೆ. ಮತ್ತೊಮ್ಮೆ ನಾನು ಹೇಳುತ್ತಿದ್ದೇನೆ, ಆ ಹೇಳಿಕೆಗಳನ್ನು ಕಡತದಿಂದ ತೆಗೆದು ಹಾಕಲಾಗಿದೆ. ಮಾನ್ಯ ಸಚಿವರಾದ ಜನಾರ್ಧನರೆಡ್ಡಿಯವರಾಗಲಿ, ಇನ್ನಿತರೆ ಸದಸ್ಯರು ಆಕ್ಷೇಪಾರ್ಹವಾದ ಮಾತುಗಳನ್ನು ಹೇಳಿದ್ದರೆ, ಅದನ್ನು ನೋಡಿಕೊಂಡು ಆ ಹೇಳಿಕೆಗಳನ್ನು ತೆಗೆದು ಹಾಕಲಿಕ್ಕೆ ನಾನು ಸೂಚನೆಯನ್ನು ಕೊಟ್ಟಿದ್ದೇನೆ. ಹಾಗಾಗಿ ಈ ವಿಷಯವನ್ನು ಇಲ್ಲಿಗೇ ಮುಕ್ತಾಯಗೊಳಿಸೋಣ. ಮಾನ್ಯ ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯನವರು ಬೆಳಿಗ್ಗೆ ನಿಲುವಳಿ ಸೂಚನೆ ಸಲ್ಲಿಕೆ ಮುಖಾಂತರ ಕೆಲವೊಂದು ಪ್ರಾಥಮಿಕ ಹಂತದ ಚರ್ಚೆಯನ್ನು ಪ್ರಾರಂಭ ಮಾಡಿದರು, ಕಾನೂನು ಸುವ್ಯವಸ್ಥೆ ನಿಲುವಳಿ ಸೂಚನೆಯ ಅಡಿಯಲ್ಲಿ ನಿಯಮಾವಳಿ ಪ್ರಕಾರ ಬರುವುದಿಲ್ಲ, ಆದರೆ ಸಾರ್ವಜನಿಕ ಮಹತ್ವದ ವಿಚಾರವಾಗಿ ಪ್ರಸ್ತಾಪ ಮಾಡಿದ್ದರಿಂದ, ಆ ವಿಷಯವನ್ನು ಚರ್ಚೆ ಮಾಡಲಿಕ್ಕೆ ಸರ್ಕಾರದ ಪರವಾಗಿ ನಾವು ತಯಾರಿದ್ದೇವೆನ್ನುವಂತಹ ಮಾತನ್ನು ಮಾನ್ಯ ಸುರೇಶ್ ಕುಮಾರ್‌ರವರು ಬೆಳಿಗ್ಗೆಯೂ ಹೇಳಿದ್ದರು. ಸರ್ಕಾರವೂ ಆ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ತಯಾರಿದ್ದಂತಹ ಸಂದರ್ಭದಲ್ಲಿ ಇದು ನಿಲುವಳಿ ಸೂಚನೆ ಅಡಿಯಲ್ಲಿ ಚರ್ಚೆ ಮಾಡಲು ಆಗುವುದಿಲ್ಲ ಎನ್ನುವ ಕಾರಣದ ಮೇಲೆ ಅದನ್ನು ನಿಯಮ 69ರಲ್ಲಿ ನಾನು ಪರಿವರ್ತನೆ ಮಾಡಿ ನಿಯಮ 69ರಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಅದನ್ನು ನಾವು ನಾಳೆ ಪ್ರಶ್ನೋತ್ತರ ಕಾಲ ಮುಗಿದ ನಂತರ ಚರ್ಚೆಗೆ ತೆಗೆದುಕೊಳ್ಳೋಣ. ಇವತ್ತು ಪ್ರಶ್ನೋತ್ತರವನ್ನು ಪ್ರಾರಂಭ ಮಾಡೋಣ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಸಭಾಧ್ಯಕ್ಷರೆ, ನಾನು ಮಾನ್ಯ ಪ್ರತಿಪಕ್ಷದ ನಾಯಕರಲ್ಲಿ ಕೇಳಿಕೊಳ್ಳುವುದು, ಈ ವಿಷಯವನ್ನು ಚರ್ಚಿಸಲು ನಿಯಮ 69 ಕ್ಕೆ convert ಮಾಡಿದ್ದಾರೆ. ನಾವು ಚರ್ಚೆಗೆ ಸಿದ್ದವೆಂದು ಆಗಲೇ ಹೇಳಿದ್ದೇವೆ. ಇವತ್ತು ಇರುವ ಪರಿಸ್ಥಿತಿಯ ವಾತಾವರಣದ ಹಿನ್ನೆಲೆಯಲ್ಲಿ I suggest it is left to you to decide. ಈ ವಿಷಯವನ್ನು ಎರಡು-ಮೂರು ದಿವಸ ಆದ ಮೇಲೆ ತೆಗೆದುಕೊಳ್ಳುವುದು ಒಳ್ಳೆಯದು ಎಂದು ಅನ್ನಿಸುತ್ತದೆ. ಇವತ್ತು ಇರುವ ವಾತಾವರಣದಲ್ಲಿ ನಾವು ಇಲ್ಲಿ ಚರ್ಚೆ ಮಾಡುವುದು ಅಷ್ಟು ಸೂಕ್ತ ಆಗುವುದಿಲ್ಲ. ತಾವು ಬಹಳ ಸಾರಿ ಹೇಳುತ್ತೇವೆ, ನಮ್ಮ ದೊಡ್ಡ ಕರ್ತವ್ಯ ಇದೆ, ಜವಾಬ್ದಾರಿ ಇದೆ, ನಾನು ತಮ್ಮ ವಿವೇಚನೆಗೆ ಬಿಡುತ್ತೇನೆ, ಈ ವಿಚಾರವನ್ನು ಖಂಡಿತವಾಗಿ ಚರ್ಚೆ